## :ಪತ್ರಿಕಾ ಪ್ರಕಟಣೆ:

## ಹಾರೋಹಳ್ಳಿ ಪೊಲೀಸ್ ಠಾಣೆ

## ರಾಮನಗರ ಉಪ ವಿಭಾಗ, ರಾಮನಗರ ಜಿಲ್ಲೆ.

ದಿನಾಂಕ **22/02/2021** ರಂದು ಕನಕಪುರ ತಾಲ್ಲೂಕು ಮರಳವಾಡಿ ಗ್ರಾಮದ ಅನ್ನಪೂರ್ಣೇಶ್ವರಿ ಆಶ್ರಮ ಬಳಿ ಕೆರೆಯ ಹತ್ತಿರ ಚಿಕ್ಕ ಮುನೇಶ್ವರ ಗುಡಿ ಬಳಿ ಅಪರಿಚಿತ ವ್ಯಕ್ತಿಯೊಬ್ಬ ಅಕ್ರಮವಾಗಿ ಯಾವುದೋ ಮಾದಕ ವಸ್ತುವನ್ನು ಮಾರಾಟ ಮಾಡುತ್ತಿರುವುದಾಗಿ ಹಾರೋಹಳ್ಳಿ ಠಾಣಾ ಪಿ.ಎಸ್.ಐ ರವರಿಗೆ ಬಂದ ಮಾಹಿತಿ ಮೇರೆಗೆ ವಿಚಾರವನ್ನು ಮೇಲಾಧಿಕಾರಿಯವರಿಗೆ ತಿಳಿಸಿ, ಅನುಮತಿ ಪಡೆದು ನಿಯಾಮಾನುಸಾರ ದಾಳಿ ಮಾಡಿದಾಗ ಸುನಿಲ್ ಚೌದರಿ ಬಿನ್ ಓಂರಾಮ್ ಚೌದರಿ ಈತ ಅಕ್ರಮವಾಗಿ ಮಾದಕ ವಸ್ತುಗಳಲ್ಲಿ ಒಂದಾದ ಗಾಂಜಾ ವನ್ನು ಇಟ್ಟುಕೊಂಡಿದ್ದು ಮಾರಾಟ ಮಾಡುತ್ತಿರುವುದಾಗಿ ಖಚಿತಪಡಿಸಿಕೊಂಡು ವಶಕ್ಕೆ ಪಡೆದು ಠಾಣೆಗೆ ಕರೆತಂದು ಮೊ ನಂ **31/2021** ಕಲಂ **8,20**(ಬಿ) ಎ.ಡಿ.ಪಿ.ಎಸ್ ಕಾಯ್ದೆ ರೀತ್ಯಾ ಸ್ವತಃ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿರುತ್ತೆ. ನಂತರ ಕೃತ್ಯಕ್ಕೆ ಸಂಬಂಧಿಸಿದಂತೆ **2**ನೇ ಆರೋಪಿ ರವೀಶ ಬಿನ್ ಗಿರಿಮಲ್ಲಯ್ಯ, ಈತನನ್ನು ಸಹ ಪತ್ತೆ ಮಾಡಿ ದಸ್ತಗಿರಿ ಕ್ರಮ ಜರುಗಿಸಿ ಆರೋಪಿಗಳಿಂದ ಸುಮಾರು **07** ಲಕ್ಷ ರೂ ಬೆಲೆ ಬಾಳುವ ಒಟ್ಟು **15** ಕೆ.ಜಿ ಒಣ ಗಾಂಜಾ ಸೊಪ್ಪು, ಒಂದು ತೂಕದ ಯಂತ್ರ, **1,200/-** ರೂ ನಗದು ಹಣ ಹಾಗೂ ಒಂದು ದ್ವಿಚಕ್ರವಾಹನ ಇವುಗಳನ್ನು ಅಮಾನತ್ತು ಪಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿರುತ್ತೆ. ಹಾಗೂ ಆರೋಪಿಗಳು ಮಾದಕ ವಸ್ತುವಾದ ಗಾಂಜಾವನ್ನು ತಮಿಳುನಾಡಿನ ತೀರ್ಥಂನ ಮುನಿಯಮ್ಮ @ ಅವ್ವ ಮತ್ತು ನಾಗ ಎಂಬುವವರ ಕಡೆಯಿಂದ ಹಾಗೂ ಹೊಗೇನಿಕಲ್ ಕಡೆಗಳಲ್ಲಿ ಖರೀದಿಸುತ್ತಿದ್ದ ಬಗ್ಗೆ ತಿಳಿದುಬಂದಿರುತ್ತೆ. ಪ್ರಕರಣದಲ್ಲಿ ಮತ್ತೊಬ್ಬ ಆರೋಪಿ ಸಹ ಭಾಗಿಯಾಗಿರುವ ಬಗ್ಗೆ ತಿಳಿದು ಬಂದಿದ್ದು ಸದರಿ ಆರೋಪಿಯ ಪತ್ತೆಗಾಗಿ ಜಾಲ ಬೀಸಿರುತ್ತೆ.

<u>ಆರೋಪಿಗಳ ವಿವರ</u>

1) ಸುನಿಲ್ ಚೌದರಿ ಬಿನ್ ಓಂರಾಮ್ ಚೌದರಿ , **23** ವರ್ಷ, ಚೌದರಿ ಜನಾಂಗ, ವ್ಯಾಪಾರ, ವಾಸ: ಹಾಲಿ ಡೈರಿಯ ಬಳಿ, ಹಾರೋಹಳ್ಳಿ ಟೌನ್, ಕನಕಪುರ ತಾ, ಸ್ವಂತ ಸ್ಥಳ-ಅಸಲ್ಯೆ ಗ್ರಾಮ, ಜೈತರಾನ್ ತಾ, ಪಾಲಿ ಜಿಲ್ಲೆ, ರಾಜಸ್ಥಾನ ರಾಜ್ಯ
2) ರವೀಶ ಬಿನ್ ಗಿರಿಮಲ್ಲಯ್ಯ **25** ವರ್ಷ, ಒಕ್ಕಲಿಗರು, ಕೋಳಿ ಅಂಗಡಿ ವ್ಯಾಪಾರ, ತುಂಬೇನಹಳ್ಳಿ ಗ್ರಾಮ, ರಾಮನಗರ ತಾಲ್ಲೂಕು.
3) ಮತ್ತೊಬ್ಬ ಆರೋಪಿ.( ತಲೆಮರಸಿಕೊಂಡಿರುತ್ತಾನೆ.)

<u>ಮೇಲ್ಕಂಡ ಆರೋಪಿಗಳಿಂದ ವಶಪಡಿಸಿಕೊಳ್ಳಲಾದ ಮಾಲಿನ ವಿವರ</u>,

1) **15** ಕೆ.ಜಿ ಒಣ ಗಾಂಜಾ ಸೊಪ್ಪು,
2) ಒಂದು ತೂಕದ ಯಂತ್ರ,
3) **1,200/-** ರೂ ನಗದು ಹಣ
4) ಒಂದು ಡಿಯೋ ದ್ವಿಚಕ್ರ ವಾಹನ

ಇವುಗಳ ಒಟ್ಟು ಮೌಲ್ಯ ಸುಮಾರು **08** ಲಕ್ಷ ರೂ ಗಳಾಗಿರುತ್ತವೆ.

ಈ ಪ್ರಕರಣವನ್ನು ಪತ್ತೆ ಮಾಡಿ ಯಶಸ್ವಿಯಾಗುವಲ್ಲಿ ಮಾನ್ಯ ರಾಮನಗರ ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಶ್ರೀ ಗಿರೀಶ್ ಎಸ್ ಐ.ಪಿ.ಎಸ್ ರವರ ಮಾರ್ಗದರ್ಶನವಿದ್ದು ಮಾನ್ಯ ರಾಮನಗರ ಉಪ ವಿಭಾಗದ ಉಪಾಧೀಕ್ಷಕರವರಾದ ಶ್ರೀ ಮೋಹನ್ ಕುಮಾರ್ ಹಾಗೂ ಹಾರೋಹಳ್ಳಿ ವೃತ್ತ ನಿರೀಕ್ಷಕರವರಾದ ಶ್ರೀ. ರಾಮಪ್ಪ ಬಿ. ಗುತ್ತೇರ್ ರವರ ಸಲಹೆ ಸೂಚನೆ ಮೇರೆಗೆ ಹಾರೋಹಳ್ಳಿ ಉಪನಿರೀಕ್ಷಕರವರಾದ ಶ್ರೀ.ಮುರುಳಿ ಟಿ, ಸಿಬ್ಬಂದಿಯವರಾದ ಹೆಚ್.ಸಿ-**422** ಬೋರೇಗೌಡ, ಹೆಚ್.ಸಿ-**311** ವಿಶ್ವನಾಥ್, ಹೆಚ್,ಸಿ-**459** ರಾಜು,ಹೆಚ್.ಸಿ-**482** ಸತೀಶ, ಪಿಸಿ-**362** ಶ್ರೀನಿವಾಸ್, ಪಿಸಿ-**240** ಮಧು, ಪಿ ಪಿಸಿ-**176** ಮಾಳಪ್ಪ,ಪಿಸಿ-**822** ಖಾದರ್ ಭಾಷ, ಪಿಸಿ-**832** ವಿನೋದ್ ಹಾಗೂ ಜೀಪ್ ಚಾಲಕರಾದ ಶ್ರೀಕಾಂತ್ ರವರುಗಳ ಪರಿಶ್ರಮವಿದ್ದು ಈ ವಿಶೇಷ ತಂಡದ ಕಾರ್ಯಾಚರಣೆಗೆ ಮಾನ್ಯ ಪೊಲೀಸ್ ಅಧೀಕ್ಷಕರು ರಾಮನಗರ ಜಿಲ್ಲೆ ರವರು ಪ್ರಶಂಸಸಿರುತ್ತಾರೆ.




ಆರೋಪಿ ಸುನಿಲ್ ಚೌದರಿ ಆರೋಪಿ ರವೀಶ

